ಬುತ್ತಿ ಚಿಗುರು

## ಗಟ್ಟಿ ಆರೋಗ್ಯದ ಗುಟ್ಟು

ಆರೋಗ್ಯವಂತ ಎಂಬತ್ತರ ಆಸುಪಾಸಿನ ವೃದ್ಧ ದಂಪತಿಯ ಬಳಿ ಬಂದ ಒಬ್ಬ ವ್ಯಕ್ತಿ 'ಅಜ್ಜಾ ... ನಿಮ್ಮ ಗಟ್ಟಿ ಆರೋಗ್ಯದ ಗುಟ್ಟೇನು?' ಎಂದು ಕೇಳಿದ.

ಆಗ ವೃದ್ಧದಂಪತಿ 'ಗುಟ್ಟು ಇಲ್ಲಾ ಗಿಟ್ಟೂ ಇಲ್ಲ... ಅದೇನು ಅಂದ್ರೆ ನಾವು ಮದುವೆ ಆದಾಗ ಒಂದು ಒಪ್ಪಂದ ಮಾಡಿಕೊಂಡಿದ್ದೆವು. ಏನಂದ್ರೆ ನಮ್ಮಲ್ಲಿ ಜಗಳ ಶುರು ಆಗಿ ಅದರಲ್ಲಿ ತಪ್ಪು ಮಾಡಿದವರು ನಾಲ್ಕು ಕಿಲೋಮೀಟರ್ ದೂರ ನಡೆದು ಹೋಗಬೇಕು ಅಂತ. ಇದರಲ್ಲಿ ನಿತ್ಯ ನಂದೇ ತಪ್ಪು ಇರುತ್ತಿದ್ದರಿಂದ ನಾನು ನಡೆದು ಹೋಗುತ್ತಿದ್ದೆ... ಎಂದು ಹೇಳುವುದನ್ನು ಅರ್ಧಕ್ಕೆ ತಡೆದ ಆ ವ್ಯಕ್ತಿ 'ಹಾಗಿದ್ರೆ ಅಜ್ಜಿ ಆರೋಗ್ಯದ ಗುಟ್ಟೇನು?' ಎಂದು ಕೇಳಿದ. ಆಗ ಆ ಅಜ್ಜ ಹುಸಿನಗೆ ಚೆಲ್ಲಿ 'ಅದಾ... ನಾನು ಅಷ್ಟು ದೂರ ಹೋಗ್ತಿನೋ ಇಲ್ವೋ



ಅನ್ನೋದನ್ನ ಪರೀಕ್ಷೆ ಮಾಡೋಕೆ ನನ್ನ ಹಿಂದೆ ಆಕೆ ಬರ್ತಾ ಇದ್ಲು' ಎಂದು ಉತ್ತರಿಸಿದ!

**ಅರವಿಂದ ಜಿ. ಜೋಷಿ**

---

## ಹಿಟ್ ಹೊಡಿ...!

ಮನೆಯಲ್ಲಿ ಸಿಕ್ಕಾ ಪಟ್ಟೆ ಜಿರಳೆಗಳಾಗಿ ಬಿಟ್ಟಿದ್ದವು. ಮನೆಯವರಿಗೆ ಹೇಳಿ ಅಂಗಡಿಯಿಂದ 'ಹಿಟ್' ಸ್ಪ್ರೇ ತರಿಸಿಕೊಂಡೆ. ಮೂಗಿಗೆ ಬಟ್ಟೆ ಕಟ್ಟಿಕೊಂಡು ಸಂಧಿ ಸಂಧಿಗೆ ಸ್ಪ್ರೇ ಹೊಡೆದೆ. ದುಬುದುಬು ಎಲ್ಲಾ ಕಡೆ ಜಿರಳೆ ಸತ್ತು ಬಿದ್ದವು. ಎಲ್ಲಾ ಬಳಿದು ಹೊರಹಾಕಿದ ಮೇಲೆ ನೆಮ್ಮದಿ ಎನಿಸಿತು.

ಮೆಟ್ಟಿಲಿಳಿದು ಸಂಜೆಯ ವಾಕ್ ಹೊರಟವಳಿಗೆ ಹೊಸತಾಗಿ ಕೆಳಗಿನ ಮನೆಗೆ ಬಾಡಿಗೆಗೆ ಬಂದಿದ್ದ ಉತ್ತರಕರ್ನಾಟಕದ ಹೆಂಗಸು ಕೂಗಿ 'ವಿನುತಮ್ಮ ಮನೆ ತುಂಬಾ ಜಿರಳೆ ಏನು ಮಾಡಲಿ' ಅಂತ ಕೇಳಿದರು. 'ಅಯ್ಯೋ ಅದಕ್ಕೇನು ಹಿಟ್ ಹೊಡೀರಿ ಎಲ್ಲಾ ಸಾಯ್ತಾವೆ' ಎನ್ನುತ್ತಾ ವಾಕ್ ಹೊರಟೆ. ವಾಕ್ ಮುಗಿಸಿ ವಾಪಸ್ ಬರೋವಾಗ ಕಾಂಪೌಂಡ್ ತುಂಬಾ ಬಿಳಿಯ ಪೌಡರ್, ಕೆಳಗಿನ ಮನೆ ಹೆಂಗಸು ಜೋಳದ ಹಿಟ್ಟಿನ ಡಬ್ಬ ಹಿಡಿದು ಮೂಲೆಮೂಲೆಗೆ



ಎರಚುತಿದ್ದರು. 'ಹೇಳಿದ್ರಲ್ಲಮ್ಮ ಅದಕ್ಕೆ ಹಿಟ್ಟು ಹೊಡೀತಿದೀನಿ' ಎಂದರು. ಬಿದ್ದು ಬಿದ್ದು ನಗುವ ಸರದಿ ನನ್ನದಾಗಿತ್ತು.

**ವಿನುತಾ ಸುಧೀರ್**